

ಕಲೆ: ಸುರೇಶ್ ಅರ್ಕಸಾಲಿ

ಗೋವಿನ ಸಾತ್ವಿಕತೆಯ ವಿಜಯವೇ ಮುಖ್ಯವಾಗಿದ್ದರೆ ಕೊನೆಯಲ್ಲಿ ಹುಲಿ ಯಾಕೆ ಸಾಯಬೇಕು ಎಂಬ ಪ್ರಶ್ನೆಯೊಂದು ಉಳಿಯುತ್ತದೆ. ಸಾತ್ವಿಕತೆ ದುಷ್ಟತನವನ್ನು ಗೆಲ್ಲಬಹುದು. ಅಥವಾ ದುಷ್ಟತನವನ್ನು ಒಳ್ಳೆಯತನದಲ್ಲಿ ಮಾರ್ಪಡಿಸಬಹುದು. ಆದರೆ ಹುಲಿ 'ಹಾರಿ ನೆಗೆದು ಪ್ರಾಣ ಬಿಟ್ಟಿತು' ಎಂಬ ಮಾತಿಗೆ ಅರ್ಥವೇನು?

## ಪ್ರಾಕೃತಿಕ ಭೂಮಿಕೆ

ಕವಿತೆಯ ಕೊನೆಗೆ ಬರುವ ಹುಲಿಯ ಸಾವಿನ ಪ್ರಸಂಗ ಕವಿತೆಯ ಅರ್ಥ ವ್ಯಾಪ್ತಿಯ ಬಗ್ಗೆ ಇನ್ನೊಮ್ಮೆ ವಿಚಾರಮಾಡಲು ಪ್ರೇರೇಪಿಸುತ್ತದೆ. ಗೋವು ಹಾಗೂ ಹುಲಿಗಳು ಕೇವಲ ಒಳಿತು ಮತ್ತು ಕೆಡುಕುಗಳ ಪ್ರಾತಿನಿಧಿಕ ಪಾತ್ರಗಳಾಗಿವೆಯೇ? ಒಂದು ಸ್ತರದಲ್ಲಿ ಹೌದು. ಆದರೆ ಕವಿತೆಗೆ ಬೇರೆ ಸ್ತರವೂ ಇದೆ. ಗೋವು ಮತ್ತು ಹುಲಿ ಇವುಗಳ ನಡುವಿನ ಸಹಜ ವೈರದಿಂದ ಅವುಗಳ ನಡುವೆ ಒಂದು ತೀವ್ರ ವಿರೋಧ ಮೇಲುನೋಟಕ್ಕೆ ಕಾಣುತ್ತದೆ. ಆದರೆ ಈ ವಿರೋಧ ಈ ಪ್ರಾಣಿಗಳ ಪ್ರಾಕೃತಿಕ ಭೂಮಿಕೆಗೆ ಮಾತ್ರ ಸಂಬಂಧಿಸಿದ್ದಾಗಿದೆ. ಈ ದೃಷ್ಟಿಯಿಂದ ಮಾತ್ರ ಗೋವು ಸಾತ್ವಿಕತೆಯ ಪ್ರತೀಕವಾಗಿ ಹುಲಿ ದುಷ್ಟವಾಗುತ್ತದೆ. ಆದರೆ ಮೌಲ್ಯಗಳ ದೃಷ್ಟಿಯಿಂದ ಬೇರೆ ಪ್ರಪಂಚವೊಂದು ಕಾಣುತ್ತದೆ. ಗೋವಿನದು ಸಾಂಸಾರಿಕ ಮೌಲ್ಯಗಳ ಮತ್ತು ಸಂಬಂಧಗಳ ಪ್ರಪಂಚವಾಗಿದೆ. ಬೆಟ್ಟದ ತುದಿಯಲ್ಲಿ